# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 14 ನೇ ಜುಲೈ ಮಾಹೆ 2025 ನೇ ಇಸವಿ

**ಸಿ.ಸಿ.ನಂ. 1937/2024**

ವಿಕಾಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ,
1 ನೇ ಅಂತಸ್ತು, ಎಸ್.ಜೆ. ಆರ್ಕೇಡ ಕಟ್ಟಡ, ಮುಖ್ಯ ರಸ್ತೆ, ಕಾರ್ಕಳ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ, ಹೆಬ್ರಿ ಶಾಖೆ,
ಪ್ರತಿನಿಧಿಸುವವರುಃ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀನಿವಾಸ್ ಕಾರ್ಲ,
ತಂದೆಃ ದಿ. ಮಹಾಬಲ,
ಪ್ರಾಯಃ 47 ವರ್ಷಗಳು,
ವಾಸಃ ಕಾರ್ಕಳ, ಕಾರ್ಕಳ ತಾಲೂಕು. … ಪಿರ್ಯಾಧಿದಾರರು

- ವಿರುದ್ಧ -

ಪದ್ಮಾವತಿ,
ಪ್ರಾಯಃ 34 ವರ್ಷ,
ಗಂಡಃ ಹರೀಶ್ ಎ.ಪಿ.,
ವಾಸಃ ಉಜೂರು, ತನ್ಕೊಲ್ಲಿ,
ಪಾಡ್ಕ ಶಾಲೆ ಹತ್ತಿರ, ಕಲಾ ಗ್ರಾಮ,
ಹೆಬ್ರಿ ಅಂಚೆ ಮತ್ತು ಗ್ರಾಮ,
ಹೆಬ್ರಿ ತಾಲೂಕು, ಉಡುಪಿ ಜಿಲ್ಲೆ. …. ಆರೋಪಿ

## ಆಪಾದನೆಯ ಸಾರಾಂಶ

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಾದ ವಿಕಾಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ರವರಿಂದ ಸಾಲವನ್ನು ಪಡೆದುಕೊಂಡಿದ್ದು, ಅದರ ಮರುಪಾವತಿಸುವ ಸಲುವಾಗಿ ದಿನಾಂಕ 23.09.2024 ರಂದು ರೂ.74,615/- ಗಳಿಗೆ ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್, ಹೆಬ್ರಿ ಶಾಖೆ ಚೆಕ್ಕು ಸಂಖ್ಯೆ 033609 ನ್ನು ನೀಡಿದ್ದು, ಸದರಿ ಚೆಕ್ಕನ್ನು ದಿನಾಂಕ 23.09.2024 ರಂದು ಫಿರ್ಯಾದಿದಾರರು ಫೆಡರಲ್ ಬ್ಯಾಂಕ್, ಹೆಬ್ರಿ ಶಾಖೆಗೆ ಹಾಜರುಪಡಿಸಿದ್ದು, ದಿನಾಂಕ 24.09.2024 ರಂದು ಸದರಿ ಚೆಕ್ಕು ಮಾನ್ಯಗೊಳ್ಳದೆ ‘Funds Insufficient’ (ಸಾಕಷ್ಟು ಹಣ ಇಲ್ಲ) ಎಂಬ

ಹಿಂಬರಹದೊಂದಿಗೆ ಹಿಂತಿರುಗಿ ಬಂದಿದ್ದು, ಅದರಂತೆ ಪಿರ್ಯಾದಿದಾರರು ದಿಃ 03.10.2024 ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 14.10.2024 ರಂದು ಜಾರಿಯಾಗಿದ್ದು, ಆದರೆ ಇದುವರೆಗೆ ನೀವು ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆದುದರಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1: ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?
ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,
ಕಾರ್ಕಳ.